**<u>ದಿನಾಂಕಃ 27.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- ವಾದಿ ಪರ ಶ್ರೀ ಜೆ.ಡಿ. ವಕೀಲರಿಂದಃ</u>**

1) ನಾನು ನಿವೃತ್ತ ಪೊಲೀಸ್ ಅಧಿಕಾರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ಪದನಾಮವನ್ನು ಬರೆಸಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ನಮ್ಮ ವಕೀಲರು ತಯಾರಿಸಿರುತ್ತಾರೆ. ಅದನ್ನು ನನ್ನ ಮಾಹಿತಿ ಮೇರೆಗೆ ತಯಾರಿಸಿರುತ್ತಾರೆ. ನನ್ನ ತಂದೆಗೆ ಒಟ್ಟು 7 ಜನ ಮಕ್ಕಳು. ನಾವು ಒಟ್ಟು ಮೂರು ಜನ ಹೆಣ್ಣು ಮಕ್ಕಳು ಮತ್ತು ನಾಲ್ಕು ಜನ ಗಂಡು ಮಕ್ಕಳು. ನನ್ನ ಹಿರಿಯ ಸಹೋದರನ ಹೆಸರು ರಾಮಸಂಜೀವ್ ಮೂರ್ತಿ. ಆತನ ಮಗಳೇ ಈ ಪ್ರಕರಣವನ್ನು ಹೂಡಿರುತ್ತಾರೆ ಎಂದರೆ ಸರಿ.

2) ನಾನು ಹುಟ್ಟಿದ ಕಾಲದಿಂದಲೂ ನನ್ನ ಗ್ರಾಮದಲ್ಲಿ ವಾಸವಿರುತ್ತೇನೆ. ನನ್ನ ನಿವೃತ್ತಿ ಪೂರ್ವದಲ್ಲಿ ನಾನು ಬೆಂಗಳೂರು ನಗರದಲ್ಲಿ ಕೆಲಸ ಮಾಡುತ್ತಿದ್ದೆನು. ನಾನು ನನ್ನ ಕೆಲಸದ ನಿಮಿತ್ತ ಬೆಂಗಳೂರಿನಲ್ಲಿ ವಾಸವಿದ್ದರು ಸಹ ನಾನು ಆಗಾಗ ನನ್ನ ಗ್ರಾಮಕ್ಕೆ ಬಂದು ಹೋಗುತ್ತಿದ್ದೇನೆ. ಪ್ರತಿ ವಾರ ಹಾಗೂ ತಿಂಗಳಿಗೊಮ್ಮೆ ನಾನು ಗ್ರಾಮಕ್ಕೆ ಬಂದು ಹೋಗುತ್ತಿದ್ದೇನೆ. ನಮ್ಮ ಊರಿನಲ್ಲಿ ನನಗೆ ಸೇರಿದಂತೆ ಸ್ವಂತ ಮನೆ ಇರುತ್ತದೆ. ಸದರಿ ಮನೆಯಲ್ಲಿ ನನ್ನ ತಂದೆ ತಾಯಿ ಇದ್ದರು. ಪ್ರಸ್ತುತ ಆ ಮನೆಯಲ್ಲಿ ನಾನು ಇರುತ್ತೇನೆ. ಎರಡು ಮತ್ತು ಮೂರನೇ ಪ್ರತಿವಾದಿಗಳು ನನ್ನ ಕಿರಿಯ ಸಹೋದರರು ಎಂದರೆ ಸರಿ. ನೀವು ಮತ್ತು ನಿಮ್ಮ ಸಹೋದರರು ಬೇರೆ ಬೇರೆ ಮನೆಗಳಲ್ಲಿ ವಾಸವಿರುತ್ತೀರಾ ಎಂದರೆ ಸಾಕ್ಷಿ ತಮ್ಮಗಳ ನಡುವೆ ಇನ್ನು ವಿಭಾಗ ಆಗಿರದ ಕಾರಣ ತಾವೆಲ್ಲರೂ ಒಂದೇ ಮನೆಯಲ್ಲಿ ವಾಸವಿರುವುದಾಗಿ ನುಡಿಯುತ್ತಾರೆ. ಎರಡು ಮತ್ತು ಮೂರನೇ ಪ್ರತಿವಾದಿಗಳು ಕಳೆದ 30 ವರ್ಷಗಳಿಂದಲೂ ಬೆಂಗಳೂರಿನಲ್ಲಿ ವಾಸವಿರುತ್ತಾರೆ ಎಂದರೆ ಸರಿಯಲ್ಲ.

3) ದಾವ ಸ್ವತ್ತಿನಲ್ಲಿ ನನ್ನ ಅಣ್ಣ ಮತ್ತು ಆತನ ಹೆಂಡತಿ ಕಳೆದ 30 ವರ್ಷಗಳಿಂದಲೂ ವಾಸವಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಣ್ಣ ರಾಮ ಸಂಜೀವ ಮೂರ್ತಿರವರು 2000 ನೇ ಸಾಲಿನಲ್ಲಿ ಮೃತಪಟ್ಟಿರುತ್ತಾರೆ. ನನ್ನ ಅಣ್ಣ ಮೃತರಾದ ನಂತರ ಪೌತಿ ಆಧಾರದ ಮೇಲೆ

ದಾವಾ ಸ್ವತ್ತಿನ ಖಾತೆಯು ನನ್ನ ಅತ್ತಿಗೆಯ ಹೆಸರಿಗೆ ಆಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಅಣ್ಣನ ಹೆಸರಿಗೆ ದಾವಾ ಸ್ವತ್ತಿನ ಖಾತೆಯು ಯಾವ ವರ್ಷದಲ್ಲಿ ಆಗಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಅತ್ತಿಗೆ ಮತ್ತು ಆಕೆಯ ಇನ್ನಿತರ ಮಕ್ಕಳು ಕೂಡಿ ಒಪ್ಪಿಗೆಯ ಮೇರೆಗೆ ದಾವಾ ಸ್ವತ್ತಿನ ಖಾತೆಯನ್ನು ವಾದಿಯ ಹೆಸರಿಗೆ ದಾಖಲು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಮನೆ ನಿರ್ಮಾಣ ಮಾಡಲು ಗ್ರಾಮ ಪಂಚಾಯಿತಿಯಿಂದ ವಾದಿಯು ಪರವಾನಗಿಯನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಅವರು ಸುಳ್ಳು ಮಾಹಿತಿ ಮೇರೆಗೆ ಆ ರೀತಿ ಅನುಮತಿ ಪಡೆದಿರಬಹುದು ಎಂದು ನುಡಿಯುತ್ತಾರೆ. ಮನೆ ನಿರ್ಮಾಣ ಮಾಡಲು ಅನುಮತಿ ನೀಡದಂತೆ ಗ್ರಾಮ ಪಂಚಾಯಿತಿಗೆ ನಾವು ತಕರಾರು ನೀಡಿರುತ್ತೇವೆ. ಸದರಿ ತಕರಾರಿನ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ.

4) ವಾದಿಯು ಮನೆ ಕಟ್ಟುವ ವೇಳೆಗೆ ನಾವು ತಕರಾರು ಮಾಡಿರುತ್ತೇವೆ ಎಂದು ಹೇಳಿ ನಮ್ಮ ವಿರುದ್ಧ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ತಾವು ಗಲಾಟೆ ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ದೂರಿನ ಹಿನ್ನೆಲೆಯಲ್ಲಿ ಠಾಣೆಗೆ ಹೋಗಿ ಹೇಳಿಕೆಯನ್ನು ನೀಡಿರುತ್ತೇವೆ ಎಂದರೆ ಸರಿ. ಕುಟುಂಬದಲ್ಲಿನ ಸ್ವತ್ತುಗಳಲ್ಲಿ ವಿಭಾಗ ಕೋರಿ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಚನ್ನಪಟ್ಟಣದಲ್ಲಿ ದಾವೆಯನ್ನು ದಾಖಲಿಸಿರುತ್ತೇನೆ. ಈ ಪ್ರಕರಣ ದಾಖಲಾದ ನಂತರದಲ್ಲಿ ವಿಭಾಗ ಕೋರಿ ನಾನು ದಾವೆ ಹೂಡಿರುತ್ತೇನೆ. ದಾವಾ ಸ್ವತ್ತಿಗೂ ಮತ್ತು ನನಗೂ ಯಾವುದೇ ಸಂಬಂಧ ಇರದೇ ಇದ್ದರು ವಾದಿಗೆ ತೊಂದರೆ ಕೊಡಲು ವಿಭಾಗ ಕೋರಿ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ಭಾಗ ಬರಬೇಕು ಎಂದು ದಾವೆಯನ್ನು ಹೂಡಿರುತ್ತೇನೆ. ಆ ಪ್ರಕರಣದಲ್ಲಿ ಈ ದಾವೆಯಲ್ಲಿನ ಸ್ವತ್ತನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತ್ತುಗಳನ್ನು ಸೇರಿಸಿಲ್ಲ, ಕಾರಣ ದಾವಾ ಸ್ವತ್ತು ಹೊರತುಪಡಿಸಿ ನಮಗೆ ಬೇರೆ ಪಿತ್ರಾರ್ಜಿತ ಸ್ವತ್ತುಗಳು ಇರುವುದಿಲ್ಲ.

5) ಪ್ರಸ್ತುತ ನಾವು ವಾಸವಿರುವ ಮನೆ ನನ್ನ ತಂದೆ ತಾಯಿಯ ಹೆಸರಿನಲ್ಲಿ ಇರುತ್ತದೆ. ದಾವಾ ಸ್ವತ್ತಿನ ಪೂರ್ವಕ್ಕೆ ಕಣ್ವ ರಸ್ತೆ, ಪಶ್ಚಿಮಕ್ಕೆ ಮಲ್ಲಯ್ಯ ರವರ ಸ್ವತ್ತು, ಉತ್ತರಕ್ಕೆ 9 ಅಡಿ ಗಲ್ಲಿ ಮತ್ತು ದಕ್ಷಿಣಕ್ಕೆ 15 ಅಡಿ ರಸ್ತೆ ಇರುತ್ತದೆ. ದಾವಾ ಸ್ವತ್ತನ್ನು ವಿಭಾಗದ ಮೂಲಕ ನನ್ನ ತಂದೆ ತಾಯಿ ನನ್ನ ಸಹೋದರನಿಗೆ ಬಿಟ್ಟುಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಸ್ವತಿಗೂ ಮತ್ತು ನನಗೂ ಸಂಬಂಧ ಇರದೇ ಇದ್ದರೂ ಸಹ ವಾದಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ

ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**